
# ಹೂಸು

■ ಟಿ.ಎಸ್. ಗೊರವರ

ಚಿತ್ರ: ಎಸ್.ವಿ. ಹೂಗಾರ್



ಬೇಸಿಗೆಯ ದಿನದ ಅಪರಾತ್ರಿ. ಸೊಳ್ಳೆಗಳು ಹಾಡುತ್ತಿವೆ. ಸೆಕೆ ಸುತ್ತಿ ಅಲ್ಲೇ ಸುಳಿದಿರುಗುತ್ತಿದೆ. ಕಂಕುಳ, ತೊಡೆಯ ಸಂದಿಗೊಂದಿ ಎಲ್ಲೆಂದರಲ್ಲಿ ಬೆವರಿನ ಊಟೆ ಕೀಳುತ್ತಿದೆ. ಮೈ ಮೇಲಿನ ಬಟ್ಟೆಗಳನ್ನೆಲ್ಲ ಬಿಚ್ಚಿ ಆ ಕಡೆ ಬೀಸಾಕಬೇಕು ಅನ್ನಿಸುವ ಹಾಗೆ ಮನಸ್ಸು ಕುದ್ದು ಹೋಗುತ್ತಿದೆ. ಸೆಕೆಯನ್ನು ಚೂರಾದರೂ ಉಪಶಮನಗೊಳಿಸಲೆಂಬಂತೆ ಈರಣ್ಣ ಪ್ರತಿ ರಾತ್ರಿ ಮಲಗುವ ಜಾಗದ ಸುತ್ತ ಒಂದು ಕೊಡದಷ್ಟು ನೀರು ಚಳ ಹೊಡೆದು ಜಾಗ ತಣ್ಣಗೆಗೊಳಿಸುತ್ತಿದ್ದ. ಚಳ ಹೊಡೆದ ನೀರೆಲ್ಲವನ್ನು ಬಾಯಾರಿದಂತಿದ್ದ ಮಣ್ಣು ಗಟಗಟನೆ ಕುಡಿಯುತ್ತಿತ್ತು. ಆದರೂ ಮೊದಲಿಗಿಂತ ಒಂದಿಷ್ಟು ಧಗೆ ಕಮ್ಮಿಯಾದಂತೆ ತೋರುತ್ತಿತ್ತು.

ಹೆಂಡತಿಯೊಂದಿಗೆ ಹಾಸಿಗೆಯಲ್ಲಿ ದೇಹ ಚೆಲ್ಲಿದ್ದ ಈರಣ್ಣನಿಗೆ ಎಷ್ಟು ಹೊರಳಾಡಿದರೂ ಕಣ್ಣ ಬಳಿ ತಟಗೂ ನಿದ್ದೆ ಸುಳಿಯುತ್ತಿಲ್ಲ. ಹಾಳು ಸೆಕೆ ಗಿರಗಿಟ್ಲೆಯಾಡುತ್ತಿದೆ. ಮನೆಯ ಎಲ್ಲ ಕಿಟಕಿಗಳನ್ನೂ ತೆರೆದು ಇಟ್ಟಿದ್ದ. ಯಾವ ಕಿಟಕಿಯಲ್ಲೂ ಗಾಳಿಯ ಸುಳಿವಿಲ್ಲ. ಈ ಸೊಳ್ಳೆಗಳಿಗೆ ದೊಡ್ಡ ರೆಕ್ಕೆಗಳಿದ್ದರೆ ಹಾರುತ್ತ ಬರುವಾಗಲಾದರೂ ತುಸು ಗಾಳಿ ಹೊತ್ತು ತರುತ್ತಿದ್ದವೇನೋ ಅಂದುಕೊಂಡ.

ಬಾಜು ಮಲಗಿದ್ದ ಹೆಂಡತಿ ಶಾರಿಯನ್ನು ದಿಟ್ಟಿಸಿದ. ಆಕೆ ಸೀರೆ ಚೆಲ್ಲಾಪಿಲ್ಲಿ ಮಾಡಿಕೊಂಡು ನಿದ್ದೆಗೆ ಜಾರಿದ್ದಳು. ಹಣೆಯ ಮ್ಯಾಲೆ ತೇವದ ಸೆಲೆಗಳು ಕಾಣುತ್ತಿವೆ. ಜಂಪರು ತೊಯ್ದು ಬೆವರಿನ ವಾಸನೆ ಹೊಡೆಯುತ್ತಿದೆ. ಒಂದು ಸಲ ಅವಳ ಮೈ ಹಿಡಿದು ಅಲುಗಾಡಿಸಿದ. ಗಾಢ ನಿದ್ದೆಯಲ್ಲಿದ್ದಳು. 'ಇವಳದೆಂತಹ ಜಲ್ಮವೋ, ನನ್ನದೆಂತಹ ಜಲ್ಮವೋ...' ಮನಸಲ್ಲೇ ಮಾತಾಡಿಕೊಂಡ. ನಿದ್ದೆ ಬಾರದೆ ಆ ಕಡೆ ಈ ಕಡೆ ಮಗ್ಗುಲ ಬದಲಿಸಿದ. ಸಾಕಾಗಿ ಕೈಯನ್ನೇ ದಿಂಬಾಗಿಸಿಕೊಂಡು ಮಲಗಿದ. ತಲೆಯ ಕೆಳಗಿನ ಕೈಯ ಭಾಗ ಪೂರ್ತಿ ಬೆವರೊಡೆದು ಇಸ್ಸಿ ಅನ್ನಿಸಿತು. ಟವೆಲ್‌ನಿಂದ ಒರೆಸಿಕೊಂಡ. ಗಂಟಲೆಲ್ಲ ಒಣಗಿ ನಾಲಗೆ ಅಂಟಂಟಾಗತೊಡಗಿತ್ತು. ಎದ್ದು ಚರಿಗೆ ನೀರು ಕುಡಿದ. ಹೊರಗಡೆ ಹೋಗಿ ಉಚ್ಚೆ ಹೊಯ್ದ. ಉಚ್ಚೆ ಉರಿದುಕೊಳ್ಳುತ್ತ ಹೊರಬಂದವು. ಯಾತನೆ ಅನ್ನಿಸಿತು. ಬಂದು ಮತ್ತೆ ಹೆಂಡತಿಯ ಪಕ್ಕ ಅಂಗಾತವಾದ.

ನಿದ್ರೆ ಎಂಬುದು ಹಾರಿ ಹೋದ ಹಕ್ಕಿಯಂತಾಗಿತ್ತು. ಶಾರಿ ಎದ್ದು ಹೋಗಿ ಒಂದಕ್ಕೆ ಮಾಡಿ ಬಂದು ಮತ್ತೆ ಮಲಗಿದಳು. ಈರಣ್ಣನೊಳಗಿನ ಸೆಕೆಯೊಂದಿಗೆ ಸಿಟ್ಟೂ ಸೇರಿಕೊಂಡಿತು. ಅವಾಗಲೇ ತಾನು ಎಬ್ಬಿಸಿದರೆ ಏಳಲಿಲ್ಲ. ಈಗ ಎದ್ದು ಮತ್ತೆ ತನ್ನನ್ನು ಲಕ್ಷ್ಯಕ್ಕೂ ಹಾಕಿಕೊಳ್ಳದೆ ಮಲಗುತ್ತಿದ್ದಾಳೆ. ಒಳಗೊಳಗೆ ಹಲ್ಲು ಕಟಕರಿಸಿದ. ಅವತ್ತು ಅವಳು ರುದ್ರಪ್ಪನ ಜೊತೆ ಸಲುಗೆಯಿಂದ ಮಾತಾಡುತ್ತಿರುವುದು ಜ್ಞಾಪಕಕ್ಕೆ ಬಂತು. ರುದ್ರಪ್ಪನ ಹೆಂಡತಿ ಬೇರೆ ಅವನೊಂದಿಗೆ ಜಗಳ ಮಾಡಿಕೊಂಡು ತನ್ನ ತವರಿಗೆ ಹೋಗಿದ್ದಾಳೆ. ಅನುಮಾನದ ಹುಳು ಇನ್ನಿಲ್ಲದಂತೆ ಕ್ರೀಯಾಶೀಲಗೊಂಡು ಇವನೊಳಗನ್ನು ಪರ ಪರ ಕೆರೆದು ಗಾಯಗೊಳಿಸಿತು. ಇವಳು ತನ್ನನ್ನು ನಿರ್ಲಕ್ಷ್ಯ ಮಾಡುತ್ತಿರಬೇಕೆಂದು ಭಾವಿಸಿದ ಅವನ ದೇಹ ಪೂರಾ ಬಲೂನಿನೊಳಗಿನ ಹವೆಯಂತೆ ರೋಷ ತುಂಬಿಕೊಂಡಿತು.

ಅವಳ ಕೂದಲ ಜುಟ್ಟು ಹಿಡಿದು ಕಪಾಳಿಗೆ ಎರಡು ಬಾರಿಸಬೇಕನಿಸುವಷ್ಟು ಸಿಟ್ಟಿಗೇರಿದ. ಹಾಗೆ ಮಾಡಬೇಕೆಂದು ನಿಶ್ಚಯಿಸಿ ಅವಳ ಕಡೆಗೆ ಮಗ್ಗುಲು ಬದಲಿಸಿದ. ಆ ವೇಳೆಗೆ ಶಾರಿ ಒಂದು ಹೂಸು ಬಿಟ್ಟಳು. ಈರಣ್ಣ 'ಹಡ್ಬಿಟ್ಟಿ, ಹೊಟ್ಟೆಗೆ ಅದೇನು ತಿಂತಾಳೋ. ಗಬ್ಬು ನಾರುವಂಗ ಹೂಸು ಬಿಡ್ತಾಳ...' ಎಂದುಕೊಳ್ಳುತ್ತ ಮೂಗು ಮುಚ್ಚಿಕೊಂಡು, ಮತ್ತೆ ಆ ಕಡೆ ತಿರುಗಿದ. ಹತ್ತಾರು ನಿಮಿಷದೊಳಗೆ ಆ ಹೂಸು ಮನೆಯಂಥ ಮನೆಯನ್ನೇ ಸಾಮ್ರಾಜ್ಯವಾಗಿ ವಿಸ್ತರಿಸಿಕೊಂಡು ಆಡಳಿತ ನಡೆಸತೊಡಗಿತು. ಏನಿಲ್ಲವೆಂದರೂ ತನ್ನ ಅಸ್ತಿತ್ವವನ್ನು ಹತ್ತಿಪ್ಪತ್ತು ನಿಮಿಷಗಳ ಕಾಲವಾದರೂ ಅದು ಸಾರಿ ಸಾರಿ ಹೇಳುತ್ತದೆ. ಸ್ವಲ್ಪ ಹೊತ್ತು ಕಳೆದ ನಂತರ ಮತ್ತೆ ಅವಳ ಜುಟ್ಟು ಹಿಡಿದು ನಿದ್ದೆಗಣ್ಣಲ್ಲೇ ಅವಳಿಗೆ ಹೊಡೆಯಬೇಕೆಂದು ತಿರುಗಿದ. ಅಲ್ಲಿ ನೋಡಿದರೆ ಶಾರಿಯೇ ಕಾಣುತ್ತಿಲ್ಲ.

ಅವನಿಗೆ ದಿಗಿಲಾಯಿತು. ಸಿಟ್ಟು ಅಂಗಾಲಿನಿಂದ ಅಳ್ಳೆತ್ತಿವರೆಗೂ ಸರ ಸರನೆ ಏರಿ ನರನಾಡಿಗಳೆಲ್ಲ ಉರಿಯತೊಡಗಿದವು. ಆ ರೋಷಕ್ಕೆ ಮೈಯಂತ ಮೈಯೆಲ್ಲ ಗಡ ಗಡ ನಡುಗತೊಡಗಿತ್ತು. ಕಣ್ಣು ಕೆಂಪಗೆ ಕೆಂಡದುಂಡೆಗಳನ್ನು ಉಗುಳತೊಡಗಿತ್ತು. ಅವಳು ರುದ್ರಪ್ಪನ ಮನೆಗೆ ಹೋಗಿರಬೇಕೆಂದು ಭಾವಿಸಿದ. ಅಡಿಗೆ ಮನೆಯಲ್ಲಿದ್ದ ಚೂರಿ ತೆಗೆದುಕೊಂಡ. ಅಲ್ಲೇ ಕಲ್ಲಿಗೆ ಮಸೆಯುತ್ತ, ಹರಿತಗೊಳಿಸುತ್ತ 'ಈ ಭೂಮಿ ಮ್ಯಾಗ ಅವನಾರ ಇರಬೇಕು, ಇಲ್ಲ ನಾನರ ಇರಬೇಕು. ಏನಾಗುತ್ತ ನೋಡೇ ಬಿಡ್ತಿನಿ. ತುಡುಗ ಸೂಳೆಮಗ ಇದ್ನ ಮಾಡ್ತಾನ ಅಂವ. ತನ್ನ ಹೇಂತಿ ಜೊತಿ ಗುದ್ದಾಡಿ ತವರ ಮನಿಗೆ ಕಳಿಸಿ ಕಂಡವರ ಹೇಂತಿಗೆ ಕೈಯಿ ಹಾಕ್ತಾನ...' ಅಂತ ಹಲ್ಲು ಕಡಿಯುತ್ತ ಚೂರಿ ಹರಿತಗೊಳಿಸಿಕೊಂಡು ರುದ್ರಪ್ಪನ ಮನೆಯ ಕಡೆ ಹೊರಟ.

ಊರ ಬೀದಿಯನ್ನು ಕತ್ತಲು ಕವಚಿಕೊಂಡಿತ್ತು. ಅಲ್ಲೊಂದು ಇಲ್ಲೊಂದು ಬೀದಿದೀಪಗಳು ಕತ್ತಲು ಸೀಳುವ ಕಾಯಕದಲ್ಲಿ ಮಗ್ನವಾಗಿದ್ದವು. ಒಂದು ನರಪಿಳ್ಳೆಯ ಸುಳಿವೂ ಇಲ್ಲ. ನಾಯಿ ಬೊಗಳುವ ಸದ್ದೂ ಇಲ್ಲ. ಊರು ಪೂರಾ ಹೊದ್ದುಕೊಂಡು ಮಲಗಿದಂತಿದೆ. ಸದ್ದುಗಿದ್ದು ಆದಿತೆಂದು ಈರಣ್ಣ ಚರಕ್... ಪರಕ್... ಎಂದು ಸದ್ದು ಮಾಡಿ ಕಂಡವರ ಕಿವಿಯೆಲ್ಲ ತುಂಬುತ್ತಿದ್ದ ತನ್ನ ಜಿರಕಿ ಚಪ್ಪಲಿ ಮನೆಯಲ್ಲೇ ಬಿಟ್ಟು ಬರಿಗಾಲಿನಲ್ಲಿಯೇ ನಡೆದಿದ್ದ.

ರುದ್ರಪ್ಪನ ಮನೆ ಸಮೀಪಿಸಿದ. ಅವರಿಬ್ಬರನ್ನೂ ಸರಿಯಾದ ಸಮಯದಲ್ಲಿ ಹಿಡಿದು ಬೆಸಿನ್ಯಾಗ ನಾದಬೇಕೆಂದು ಹೊಂಚು ಹಾಕಿದ. ರುದ್ರಪ್ಪನ ಮನೆಯಿಂದ ಕಂದೀಲಿನ ಬೆಳಕು ಕಾಣುತ್ತಿದೆ. ಮನೆಯ ಕಿಡಕಿಯಿಂದ ಇಣುಕಿ ನೋಡಿದ. ಸಣ್ಣಗೆ ನರಳಾಟ ಕೇಳಿಸಿದಂಗಾಯಿತು. 'ಸಿಕ್ರು ಈ ಸೂಳೆಮಕ್ಳು' ಅಂದುಕೊಂಡ. ಆದರೆ, ಕಿಡಕಿಯಿಂದ ನೋಡಿದರೆ ಯಾರೂ ಕಾಣುತ್ತಿಲ್ಲ. ತನ್ನನ್ನು ನೋಡಿ ಇಬ್ಬರೂ ಅಡಗಿಕೊಂಡರೇನೋ ಅಂದುಕೊಂಡು ಹೊರಗೆ ಬಹಳ ಹೊತ್ತು ಕಾಯ್ದ. ಶಾರಿ ಹೊರಬರಲಿಲ್ಲ. ಮತ್ತೊಮ್ಮೆ ಕಿಡಕಿಯಲ್ಲಿ ಇಣುಕಿದ. ಅಲ್ಲಿ ಒಂದು ಸಣ್ಣ ಜಂತುವಿನ ಚಹರೆ ಕೂಡ ಇರಲಿಲ್ಲ. 'ಅಲಾ ಕಳ್ಳಿ, ನಾ ಬಂದಿದ್ದ ಸುಳಿವು ಸಿಕ್ಕಂಗ ಆಗೇತಲಾ ನಿನಗ. ತಪ್ಪಿಸಿಕೊಂಡಿ ಇವತ್ತು. ಬೆಕ್ಕು ಎಷ್ಟು ದಿನ ಕಳ್ಳತನದಿಂದ ಹಾಲು